



PUBLISHED BY AKAAL PURKH KI FAUJ

# ನಾಲ್ವರು ಸಾಹಿಬ್ಜಾದರು



## ಹಿರಿಯ ಸಾಹಿಬ್ಜಾದಾ

## ಸಾಹಿಬ್ಜಾದಾ ಅಜಿತ್ ಸಿಂಗ್

ಪೌಂಟಾ ಸಾಹಿಬ್ನಲ್ಲಿದ್ದಾಗ ಗುರು ಗೋಬಿಂದ್ ಸಿಂಗ್ ಅವರ ಹಿರಿಯ ಮಗ ಸಾಹಿಬ್ಜಾದಾ ಅಜಿತ್ ಸಿಂಗ್ ಜೀಯವರು ಮಾತಾ ಸುಂದರಿಗೆ 26 ಜನವರಿ 1687 ರಂದು ಜನಿಸಿದರು. ಮುಂದಿನ ವರ್ಷ, ಗುರು ಸಾಹಿಬ್ ಅವರು ಆನಂದಪುರ್ ಸಾಹಿಬ್ ಗೆ ಮರಳಿದರು. ಅಲ್ಲಿಯೇ ಅಜಿತ್ ಸಿಂಗ್ ಅವರು ಅಧಿಕೃತವಾದ ಸಿಖ್ ಸಂಪ್ರದಾಯದಲ್ಲಿ ಬೆಳೆದರು.

ಬಾಬಾ ಅಜಿತ್ ಸಿಂಗ್ ಅವರು ಧಾರ್ಮಿಕ ಗ್ರಂಥಗಳನ್ನು, ತತ್ವಶಾಸ್ತ್ರ ಮತ್ತು ಇತಿಹಾಸವನ್ನೂ ಅಧ್ಯಯನ ಮಾಡಿದ್ದಲ್ಲದೆ, ಕುದುರೆ ಸವಾರಿ, ಕತ್ತಿವರಸೆ ಮತ್ತು ಬಿಲ್ಲುಗಾರಿಕೆಯಂತಹ ಪೌರುಷದ ಕಲೆಗಳಲ್ಲೂ ತರಬೇತಿಯನ್ನು ಪಡೆದರು. ಅವರು ಒಬ್ಬ ಬಲಾಢ್ಯ, ಬುದ್ಧಿವಂತ ಸುಂದರ ಯುವಕನಾಗಿ ಬೆಳೆಯುವುದರೊಂದಿಗೆ ಗಂಡೆದೆಯ ಸ್ವಾಭಾವಿಕ ನಾಯಕನಾಗಿಯೂ ಬೆಳೆದರು.



ಪ್ರತಿದಿನ ಸಂಜೆ ತಮ್ಮ ಕಿರಿಯ ಸಹೋದರ ಬಾಬಾ ಜುಜಾರ್ ಸಿಂಗ್ ಅವರೊಂದಿಗೆ ತಮ್ಮ ಸ್ನೇಹಿತರನ್ನು ಒಗ್ಗೂಡಿಸಿ ಎರಡು ಬೆಟಾಲಿಯನ್-ಗಳನ್ನು ರಚಿಸುತ್ತಿದ್ದರು. ಅವರು ಖಡ್ಗ ಹಾಗೂ ಬಾಣಗಳಿಂದ ಅಣಕು ಯುದ್ಧಗಳನ್ನು ಮಾಡುತ್ತಿದ್ದರು. ಗುರು ಗೋಬಿಂದ್ ಸಿಂಗ್ ಅವರು ಕೆಲವೊಮ್ಮೆ ತಮ್ಮ ಪುತ್ರರ ಇಂತಹ ಸೈನಿಕ ಕಸರತ್ತುಗಳನ್ನು ಹೆಮ್ಮೆಯಿಂದ ಅವಲೋಕಿಸುತ್ತಿದ್ದರು.

1699 ರ ಬೈಸಾಖಿ ದಿನದಂದು, ಗುರು ಗೋಬಿಂದ್ ಸಿಂಗ್ ಅವರು ದೈವೀಕ ಕೃಪೆ (ಡಿವೈನ್ ಬ್ಲಿಸ್) ನಗರ ಎನ್ನಲಾಗುವ ಆನಂದಪುರ್ ಸಾಹಿಬ್-ನಲ್ಲಿ ಸಿಖ್ ಸಮುದಾಯವನ್ನು ಖಾಲ್ಸಾ ಎನ್ನುವ ಹೊಸತನಕ್ಕೆ ಕೊಂಡೊಯ್ದರು. ಈ ಬ್ಯಾಪ್ಟಿಸಮ್ ಸಂಪ್ರದಾಯವು ಸಿಕ್ಖರಿಗೆ ಹೊಸ ಹಾದಿಯನ್ನು ತೋರಿಸಿತು. ಗುರು ಸಾಹಿಬ್ ಅವರ ಇಬ್ಬರು ಪುತ್ರರಾದ ಸಾಹಿಬ್ಜಾದಾ ಅಜಿತ್ ಸಿಂಗ್ ಮತ್ತು ಜುಜಾರ್ ಸಿಂಗ್ ಹಾಗೂ ಸಾವಿರಾರು ಭಕ್ತರು ಈ ನೂತನ ಸಂಪ್ರದಾಯವನ್ನು ತಮ್ಮದಾಗಿಸಿಕೊಂಡರು.



ಬಾಬಾ ಅಜಿತ್ ಸಿಂಗ್ ಒಬ್ಬ ಬಲಿಷ್ಠ ಮತ್ತು ಕೆಚ್ಚೆದೆಯ ಯೋಧರಾಗಿದ್ದರು. ಜೀವನದ ಆರಂಭಕಾಲದಲ್ಲಿಯೇ ಅವರು ತಮ್ಮ ಗುರುಗಳ ಯುದ್ಧಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು ಮತ್ತು ಹಲವಾರು ಸಂದರ್ಭಗಳಲ್ಲಿ ತಮ್ಮ ಶೌರ್ಯದ ಮೂಲಕ ಎಲ್ಲರನ್ನೂ ಬೆರಗುಗೊಳಿಸುವ ಕಾರ್ಯಗಳನ್ನು ಮಾಡಿದರು. ಯಾವುದೇ ಅಪಾಯವು ಅವರನ್ನು ಕರ್ತವ್ಯ ಮಾರ್ಗದಿಂದ ತಡೆಯಲಿಲ್ಲ ಮತ್ತು ಯಾವುದಕ್ಕೂ ಅವರು ಹೆದರಲೂ ಇಲ್ಲ.

ಖಾಲ್ಸಾವನ್ನು ರಚಿಸಿದ ನಂತರ, ಬಾಬಾ ಅಜಿತ್ ಸಿಂಗ್ ತಮ್ಮ ಕೌಶಲ್ಯದ ಮೊದಲ ಪರೀಕ್ಷೆಯನ್ನು ನೀಡಬೇಕಾಯಿತು. ವಾಯವ್ಯ ಪಂಜಾಬ್ನ ಪೊಥೋಹರ್ನಿಂದ ಬರುತ್ತಿದ್ದ ಸಿಖ್ ಸಂಗತ್-ನ್ನು ಸಟ್ಲೆಜ್ ನದಿಯ ದಡದಲ್ಲಿದ್ದ ಆನಂದಪುರ ಸಾಹಿಬ್ನಿಂದ ಸ್ವಲ್ಪ ದೂರದಲ್ಲಿರುವ ನುಹ್ ಗ್ರಾಮದ ರಂಗರ್ ಎಂಬ ಜನರು ಆಕ್ರಮಿಸಿ ಲೂಟಿ ಮಾಡಿದರು. ಗುರು ಗೋಬಿಂದ್ ಸಿಂಗ್ ಜೀಯವರು ಕೇವಲ 12 ವರ್ಷ ವಯಸ್ಸಿನ ಸಾಹಿಬ್ಜಾದಾ ಅಜಿತ್ ಸಿಂಗ್ ಅವರನ್ನು ಆ ಗ್ರಾಮಕ್ಕೆ ಕಳುಹಿಸಿದರು. 100 ಸಿಖ್ಖರ ಮುಖ್ಯಸ್ಥರಾದ ಬಾಬಾ ಅಜಿತ್ ಸಿಂಗ್ 13 ಮೇ 1699 ರಂದು ಅಲ್ಲಿಗೆ ತಲುಪಿ, ರಂಗರನ್ನು ಶಿಕ್ಷಿಸಿ ಲೂಟಿ ಮಾಡಿದ ಆಸ್ತಿಯನ್ನು ವಶಪಡಿಸಿಕೊಂಡರು.

ಮರುವರ್ಷವೇ ಅವರಿಗೆ ಇನ್ನೊಂದು ಕಷ್ಟಕರವಾದ ಜವಾಬ್ದಾರಿಯನ್ನು ವಹಿಸಲಾಯಿತು. ಸಾಮ್ರಾಜ್ಯಶಾಹಿ ಪಡೆಗಳ ಬೆಂಬಲದೊಂದಿಗೆ ಬೆಟ್ಟದ ಆಡಳಿತಗಾರರು ಆನಂದಪುರ ಸಾಹಿಬ್ ಮೇಲೆ ದಾಳಿ ನಡೆಸಿದರು. ದಾಳಿಯ ಮೊದಲ ಗುರಿಯಾಗಿದ್ದ ತಾರಾಗಢ ಕೋಟೆಯ ರಕ್ಷಣೆಯ ಹೊಣೆಯನ್ನು ಸಾಹಿಬ್ಜಾದಾ ಅಜಿತ್ ಸಿಂಗ್ ಅವರಿಗೆ ವಹಿಸಲಾಯಿತು. ಭಾಯಿ ಉದೇ ಸಿಂಗ್ ಎಂಬ ಪರಿಣಿತ ಸೈನಿಕನ ಸಹಾಯದೊಂದಿಗೆ ಅವರು ದಾಳಿಯನ್ನು ಹಿಮ್ಮೆಟ್ಟಿಸಿದರು. ಇದು ನಡೆದದ್ದು ೨೯ ಆಗಸ್ಟ್ 1700 ರಂದು. ಅವರು ಅಕ್ಟೋಬರ್ 1700 ರಲ್ಲಿ ನಡೆದ ನಿರ್ಮೋಹಗಢದ ಯುದ್ಧಗಳಲ್ಲಿಯೂ ವೀರಾವೇಶದಿಂದ ಹೋರಾಡಿದ್ದರು.

15 ಮಾರ್ಚ್ 1701 ರಂದು, (ಈಗಿನ ಸಿಯಾಲ್ಕೋಟ್ ಜಿಲ್ಲೆಯ) ದಾರಾಪ್ ಪ್ರದೇಶದಿಂದ ಬರುತ್ತಿದ್ದ ಸಿಖ್ ಭಕ್ತರ ಸಮೂಹ “ಸಂಗತ್”ನ್ನು ಗುಜ್ಜರ್‌ಗಳು ಮತ್ತು ರಂಗರ್‌ಗಳು ದಾರಿಯಲ್ಲೇ ತಡೆಹಿಡಿದರು. ಸಾಹಿಬ್ಜಾದಾ ಅಜಿತ್ ಸಿಂಗ್ ಅವರ ವಿರುದ್ಧ ದಂಡಯಾತ್ರೆ ಕೈಗೊಂಡು ಯಶಸ್ವಿಯಾದರು.

ಒಮ್ಮೆ ಒಬ್ಬ ಬ್ರಾಹ್ಮಣನು ಗುರು ಗೋಬಿಂದ್ ಸಿಂಗ್ ಜೀ ಬಳಿಗೆ ಬಂದು ತನ್ನ ಹೊಸದಾಗಿ ಮದುವೆಯಾದ ಹೆಂಡತಿಯನ್ನು ಹೊಶಿಯಾರ್ಪುರದ ಬಳಿ ಬಸ್ಸಿಯ ಪಠಾಣರು ವಶಪಡಿಸಿಕೊಂಡರು ಎಂಬುದಾಗಿ ದೂರನ್ನು ನೀಡಿದನು. ಗುರುವಿನ ಆದೇಶದಂತೆ ಬಾಬಾ ಅಜಿತ್ ಸಿಂಗ್ 100 ಕುದುರೆ

ಸವಾರರನ್ನು ಕರೆದೊಯ್ದು ಬ್ರಾಹ್ಮಣನ ಮಡದಿಯನ್ನು ರಕ್ಷಿಸಿ ಅವಳನ್ನು ಬ್ರಾಹ್ಮಣನಿಗೆ ಒಪ್ಪಿಸಿದರು ಮತ್ತು ಪಠಾಣರಿಗೆ ಸೂಕ್ತ ಶಿಕ್ಷೆಯನ್ನು ವಿಧಿಸಿದರು. ಈ ಘಟನೆಯ ಸ್ಮಾರಕವಾಗಿ ಬಸ್ಸಿಯಲ್ಲಿ ಈಗ ಗುರುದ್ವಾರವಿದೆ.

ಚಕ್ರವರ್ತಿ ಔರಂಗಜೇಬ್ ಗುರು ಗೋಬಿಂದ್ ಸಿಂಗ್ ಜೀ ಅವರಿಂದ ಸ್ಥಾಪಿಸಲ್ಪಟ್ಟ ಖಾಲ್ಸಾ ಪಂಥವನ್ನು ಸಮ್ಮತಿಸಲಿಲ್ಲ. ಸಿಖ್ಖರು ಗುರು ಗೋಬಿಂದ್ ಸಿಂಗ್ ಜೀ ಅವರನ್ನು ಸಂಬೋಧಿಸುತ್ತಿದ್ದಂತೆ ತನ್ನ ರಾಜ್ಯದಲ್ಲಿ ಯಾರೊಬ್ಬರನ್ನೂ "ಸಚ್ಚಾ ಪಾತ್ಶಾ" (ನಿಜವಾದ ಭಗವಂತ) ಎಂದು ಕರೆಯುವುದನ್ನು ಅವನು ಸಹಿಸಲಿಲ್ಲ. ಗುರುಗಳ ಸಾನ್ನಿಧ್ಯಕ್ಕೆ ಹೆಚ್ಚುತ್ತಿದ್ದ ಜನರ ಆಗಮನವನ್ನು ತಡೆಯಲು ಅವನು ತನ್ನ ಸೇನಾಪತಿಗಳಿಗೆ ಆಜ್ಞಾಪಿಸಿದ್ದನು. ಮೊಘಲ್ ಸೇನಾಪತಿಗಳು ಸಿಖ್ಖರನ್ನು ಆನಂದಪುರದಿಂದ ಹೊರಹಾಕಲು ತಮ್ಮ ಎಲ್ಲಾ ತಂತ್ರಗಳನ್ನು ಬಳಸಿದರು.

ಬೆಟ್ಟಪ್ರದೇಶದ ಮುಖ್ಯಸ್ಥರು ಮತ್ತು ಮೊಘಲ್ ಸೈನಿಕರನ್ನೊಳಗೊಂಡ ಒಂದು ಸಮ್ಮಿಲಿತ ಪಡೆಯು ಆನಂದಪುರದ ಮೇಲೆ ದಂಡೆತ್ತಿ ಬಂದು 1705 ರ ಮೇ ತಿಂಗಳಿನಲ್ಲಿ ಪಟ್ಟಣಕ್ಕೆ ಮುತ್ತಿಗೆ ಹಾಕಿತು. ದೀರ್ಘಾವಧಿಯ ದಿಗ್ಬಂಧನದ ಪರಿಣಾಮವಾಗಿ ವಿಧಿಸಲ್ಪಟ್ಟ ನಿಬಂಧನೆಗಳ ಸಡಿಲತೆಯ ಹೊರತಾಗಿಯೂ ಹಲವಾರು ತಿಂಗಳುಗಳ ಕಾಲ ಗುರು ಹಾಗೂ ಅವರ ಸಿಖ್ ಅನುಯಾಯಿಗಳು ಎಡೆಬಿಡದೆ ಮೊಘಲರ ಮುತ್ತಿಗೆಯನ್ನು ಎದುರಿಸುತ್ತಿದ್ದರು. ಅಂತಿಮವಾಗಿ ಆಕ್ರಮಣಕಾರರು ದಣಿದಿದ್ದರಿಂದ, ಸಿಕ್ಖರು ಆನಂದಪುರವನ್ನು ಬಿಟ್ಟು ಹೊರಟರೆ ಗುರು ಸಾಹಿಬ್ಗೆ ಸುರಕ್ಷಿತವಾಗಿ ನಿರ್ಗಮಿಸಲು ಅನುಮತಿಸುವುದಾಗಿ ಒಪ್ಪಿದರು.



ಆನಂದಪುರ ಸಾಹಿಬ್ನ ಈ ಸುದೀರ್ಘ ಮುತ್ತಿಗೆಯಲ್ಲಿ, ಸಾಹಿಬ್ಜಾದಾ ಅಜಿತ್ ಸಿಂಗ್ ಪುನಃ ತಮ್ಮ ಧೈರ್ಯ ಮತ್ತು ಸ್ಥೈರ್ಯದ ಗುಣಗಳನ್ನು ಪ್ರದರ್ಶಿಸಿದರು. ಕೊನೆಗೆ ಆನಂದಪುರವನ್ನು ೧೭೦೪ರ ಡಿಸೆಂಬರ್ ೫-೬ರಂದು ಖಾಲಿ ಮಾಡಿದಾಗ, ಅವರಿಗೆ ರಿಯರ್ ಗಾರ್ಡ್ ಕಮಾಂಡ್ (ಸಶಸ್ತ್ರ ಸೈನಿಕರ ಸುರಕ್ಷತೆ) ನೀಡಲಾಯಿತು. ಮುತ್ತಿಗೆ ಹಾಕಿದವರು ಸುರಕ್ಷಿತ ನಿರ್ಗಮನಕ್ಕೆ ನೀಡಲಾದ ಭರವಸೆಗಳನ್ನು ಉಲ್ಲಂಘಿಸುತ್ತಾ, ತುಕಡಿಯ ಮೇಲೆ ದಾಳಿ ಮಾಡಿದ್ದರಿಂದ, ಭಾಯಿ ಉದೆ ಸಿಂಗ್ನಿಂದು ಹಿಂದಕ್ಕೆ ಕರೆದೊಯ್ಯುವವರೆಗೂ ಅವರು ತಮ್ಮ ಅನುಯಾಯಿಗಳನ್ನು ಶಾಹಿ ಟಿಬ್ಬಾ ಎಂಬ ಬೆಟ್ಟದ ಮೇಲೆ ಪ್ರತಿದಾಳಿಯಲ್ಲಿ ತೊಡಗಿಸಿದ್ದರು. ಭಾಯಿ ಉದೆ ಸಿಂಗ್ ಅವರು ತೀರದಲ್ಲಿ ಏಕಾಂಗಿಯಾಗಿ ಶತ್ರುಗಳನ್ನು ಸೆರೆಹಿಡಿದಿದ್ದರು. ಅವರು ಹುತಾತ್ಮರಾಗುವುದಕ್ಕೆ ಮೊದಲು, ಅವರ ನಿರ್ಭೀತ ಯೋಧರು ಸೆರೆಹಿಡಿಯಲ್ಪಟ್ಟ ಶತ್ರುಗಳಲ್ಲಿ ಅನೇಕರ ಶಿರಚ್ಛೇದವನ್ನು ಮಾಡಿದರು.

ಬಾಬಾ ಅಜಿತ್ ಸಿಂಗ್ ಅವರು ತನ್ನ ತಂದೆ, ಕಿರಿಯ ಸಹೋದರ ಸಾಹಿಬ್ಜಾದಾ ಜುಜಾರ್ ಸಿಂಗ್ ಮತ್ತು ಸುಮಾರು ಐವತ್ತು ಸಿಖ್ಖರೊಂದಿಗೆ ರಭಸವಾಗಿ ಹರಿಯುತ್ತಿದ್ದ ಸರ್ಸಾ ನದಿಯನ್ನು ದಾಟಿದರು. ರೋಪರ್ನಿಂದ ಹಿಂಬಾಲಿಸಿ ಬರುತ್ತಿದ್ದ ಸೈನ್ಯದ ಕೈಯಲ್ಲಿ ಸಾವು-ನೋವುಗಳನ್ನು ಅನುಭವಿಸಿದ್ದರಿಂದ ಇವರ ಸಂಖ್ಯೆ ಕುಂಠಿತಗೊಂಡರೂ, ಇವರು ೬ ಡಿಸೆಂಬರ್ ೧೭೦೫ ರ ಸಂಜೆ ಚಮ್ಕೌರ್ ಅನ್ನು ತಲುಪಿ, ಗರ್ಹಿ ಎನ್ನುವ ಎತ್ತರದ ಗೋಡೆಯ ಕೋಟೆ-ಮನೆಯಲ್ಲಿ ಠಿಕಾಣಿಯನ್ನು ಹೂಡಿದರು. ಆತಿಥೇಯರು, ಮಲೇರ್ಕೋಟ್ಲಾ ಮತ್ತು ಸಿರ್ಹಿಂದ್ನಿಂದ ದೊರೆತ ಬಲವರ್ಧನೆಯಿಂದಾಗಿ ಮತ್ತು ಸ್ಥಳೀಯ ರಂಗರ್ಗಳು ಮತ್ತು ಗುಜ್ಜರ್ಗಳ ಸಹಾಯದಿಂದ ಶೀಘ್ರದಲ್ಲೇ ಅವರನ್ನು ಸೆರೆಹಿಡಿದು ಚಮ್ಕೌರ್-ನ ಸುತ್ತಲೂ ರಕ್ಷಣಾ-ಕೋಣೆಯನ್ನು ನಿರ್ಮಿಸಿದರು.

ಡಿಸೆಂಬರ್ ೧೭೦೫ ರ ಸೂರ್ಯೋದಯದೊಂದಿಗೆ ಅಸಾಮಾನ್ಯವಾದ ಹಾಗೂ ಕಠೋರವಾದ ಯುದ್ಧವು ಪ್ರಾರಂಭವಾಯಿತು. ಗುರು ಗೋಬಿಂದ್ ಸಿಂಗ್ ಜೀ ಅವರ ಜಾಫರ್ನಾಮಾದಲ್ಲಿ ಹೇಳಿರುವಂತೆ, ಕೇವಲ ನಲವತ್ತು ಜನರು ಲಕ್ಷಾಂತರ ಸೈನಿಕರನ್ನು ಎದುರಿಸಿದರು. ಮುತ್ತಿಗೆ ಹಾಕಿದ ನಂತರ, ತಮ್ಮಲ್ಲಿ ಉಳಿದ ಅತ್ಯಲ್ಪ ಪ್ರಮಾಣದ ಯುದ್ಧಸಾಮಗ್ರಿಗಳ ಕಾರಣದಿಂದ, ಐದು ಜನರ ಒಂದು ಗುಂಪಿನಂತೆ ಆತಿಥೇಯರನ್ನು ಖಡ್ಗ ಮತ್ತು ಈಟಿಯಿಂದ ಸುತ್ತುವರಿದರು.

ಐದು ಜನ ಸಿಖ್ ಸೈನಿಕರ ಮೊದಲ ಗುಂಪು ತಮ್ಮ ಪ್ರಾಣವನ್ನು ತ್ಯಾಗ ಮಾಡುವುದಕ್ಕೆ ಮೊದಲು ನೂರಾರು ಮೊಘಲ್ ಸೈನಿಕರನ್ನು ಕೊಂದಿತು. ಎರಡನೇ ಮತ್ತು ಮೂರನೇ ಗುಂಪು ಕೂಡ ತ್ವರಿತವಾಗಿ ಇದನ್ನೇ ಅನುಸರಿಸಿತು. ಅವರು ಭಾರೀ ಅಡೆ-ತಡೆಗಳನ್ನು ಅತಿಶಯವಾದ ಧೈರ್ಯದಿಂದ ಎದುರಿಸುತ್ತಾ ಇದೇ ರೀತಿಯ ಸಾಹಸಗಳನ್ನು ಪ್ರದರ್ಶಿಸಿದರು. ಕೋಟೆಯೊಳಗೆ

ಆಯಕಟ್ಟಿನ ಸ್ಥಳದಲ್ಲಿ ಕುಳಿತು ಗುರು ಸಾಹಿಬ್ ಅವರು ಈ ಕಠೋರ ಯುದ್ಧದ ಸಂಪೂರ್ಣ ದೃಶ್ಯವನ್ನು ವೀಕ್ಷಿಸುತ್ತಿದ್ದರು.

ಸಾಹಿಬ್ಜಾದಾ ಅಜಿತ್ ಸಿಂಗ್ ಯುದ್ಧಭೂಮಿಗೆ ಹೋಗಲು ಗುರು ಗೋಬಿಂದ್ ಸಿಂಗ್ ಜೀಯವರ ಅನುಮತಿಯನ್ನು ಕೇಳಿದರು. ಗುರು ಜೀ ಅವರನ್ನು ಆಶೀರ್ವದಿಸುತ್ತಾ ಅವರೊಂದಿಗೆ ಸಿಖ್ ಯೋಧರ ಒಂದು ತಂಡವನ್ನು ಕಳುಹಿಸಿದರು. ಯುವಕ ಸಾಹಿಬ್ಜಾದಾ ಮತ್ತು ಅವನ ಸಂಗಡಿಗರು ಕೋಟೆಯ ದ್ವಾರದಿಂದ ಹೊರಬರುತ್ತಿದ್ದಂತೆ, ಅವರ ಪಡೆಯು ಮೊಳಗಿಸಿದ "ಸತ್ ಶ್ರೀ ಅಕಾಲ್" ಎಂಬ ಘೋಷಣೆಯು ರಣರಂಗದ ಮೂಲೆ-ಮೂಲೆಯಲ್ಲೂ ಪ್ರತಿಧ್ವನಿಸಿತು.

ಮೊಘಲ್ ಸೈನಿಕರು ಯುವ ಸಾಹಿಬ್ಜಾದನನ್ನು ಎಲ್ಲಾ ಕಡೆಗಳಿಂದ ಸುತ್ತುವರೆದರು. ಆದಾಗ್ಯೂ, ಸಾಹಿಬ್ಜಾದಾ ಅವರು ಮೊಘಲ್ ಸೈನಿಕರ ಮೇಲೆ ಬಾಣಗಳ ಸುರಿಮಳೆಗೈದು ಅವರನ್ನು ತೀರದಲ್ಲೇ ತಡೆಹಿಡಿದರು. ಅವರು ಕೂಡಲೇ ಹಿಮ್ಮೆಟ್ಟಿದರಾದರೂ ತದನಂತರ, ಇತರ ಸೈನಿಕರು ಹೋರಾಟಕ್ಕೆ ಧುಮುಕಿದರು. ಬಾಬಾ ಅಜಿತ್ ಸಿಂಗ್ ಮತ್ತು ಅವರ ಸಹಚರರು ಅವರನ್ನು ಧೈರ್ಯದಿಂದ ಎದುರಿಸಿದರು. ಆದರೆ, ಅವರಲ್ಲಿದ್ದ ಬಾಣಗಳ ಸಂಗ್ರಹವು ಕಡಿಮೆಯಾಗಿತ್ತು. ಆಗ, ಕುದುರೆಯನ್ನೇರಿ ಬಾಬಾ ಅಜಿತ್ ಸಿಂಗ್ ಶತ್ರುಗಳ ಮಧ್ಯಕ್ಕೆ ಧಾವಿಸಿ, ತಮ್ಮ ಖಡ್ಗದಿಂದ ಅವರನ್ನು ಎದುರಿಸಿದರು. ಶತ್ರು ಸೈನಿಕನೊಬ್ಬ ಸಾಹಿಬ್ಜಾದಾ ಅವರತ್ತ ತನ್ನ ಕೋವಿಯಿಂದ ಗುರಿಯಿಟ್ಟನು. ಅವರು ಈ ದಾಳಿಯಿಂದ ತಪ್ಪಿಸಿಕೊಂಡರಾದರೂ, ಅವರ ಕುದುರೆಯು ಗಂಭೀರವಾಗಿ ಗಾಯಗೊಂಡಿತು. ಸಾಹಿಬ್ಜಾದಾ ಒಬ್ಬರೇ ಇರುವುದನ್ನು ಕಂಡು ಶತ್ರು ಸೈನಿಕರು ಎಲ್ಲಾ ಕಡೆಯಿಂದಲೂ ಅವರ ಮೇಲೆ ಎರಗಿದರು. ೧೯ ವರ್ಷದ, ಸಾಹಿಬ್ಜಾದಾ ಅಜಿತ್ ಸಿಂಗ್ ಭೀಕರ ಯುದ್ಧದ ನಡುವೆ ಹೋರಾಡುತ್ತಾ ತಮ್ಮ ಪ್ರಾಣವನ್ನು ಅರ್ಪಿಸಿ ಹುತಾತ್ಮರಾದರು.

ಅವರು ಹುತಾತ್ಮರಾದ ಸ್ಥಳ ಗುರುದ್ವಾರ ಕತಾಲ್ಗರ್ ಸಾಹಿಬ್ ಎಂಬಲ್ಲಿ ಈಗ ಅವರ ಸ್ಮಾರಕವಿದೆ. ಪಕ್ಕದಲ್ಲೇ ಸಾಹಿಬ್ಜಾದಾ ಜುಜಾರ್ ಅವರ ಸ್ಮಾರಕವೂ ಇದೆ.

## ಸಾಹಿಬ್ಜಾದಾ ಜುಜಾರ್ ಸಿಂಗ್

ಗುರು ಗೋಬಿಂದ್ ಸಿಂಗ್ ಜೀಯವರ ಎರಡನೇ ಮಗ ಸಾಹಿಬ್ಜಾದಾ ಜುಜರ್ ಸಿಂಗ್, ಮಾತಾ ಜೀತೋ ಜೀಯವರಿಗೆ ಆನಂದಪುರ ಸಾಹಿಬ್ ಎಂಬಲ್ಲಿ 14 ಮಾರ್ಚ್ 1691 ರಂದು ಜನಿಸಿದರು.

ಅವರ ಹಿರಿಯ ಸಹೋದರ ಸಾಹಿಬ್ಜಾದಾ ಅಜಿತ್ ಸಿಂಗ್ ಅವರಂತೆ, ಧಾರ್ಮಿಕ ಗ್ರಂಥಗಳ ಅಧ್ಯಯನದೊಂದಿಗೇ ಹೋರಾಟದ ಕೌಶಲ್ಯಗಳಲ್ಲಿಯೂ ತರಬೇತಿಯನ್ನು ಪ್ರಾರಂಭಿಸಿದರು. 1699 ರಲ್ಲಿ, ಅವರು ಎಂಟು ವರ್ಷದವರಾಗಿದ್ದಾಗ, ಖಾಲ್ಸಾ ದೀಕ್ಷೆಯ ವಿಧಿಗಳನ್ನು ಅರಿತುಕೊಂಡರು.

ಇದೇ ಅವಧಿಯಲ್ಲಿ, ಮುತ್ತಿಗೆ ಹಾಕಿದ್ದ ಶತ್ರುಗಳ ಒತ್ತಡದಿಂದಾಗಿ ಡಿಸೆಂಬರ್ 1705 ರಲ್ಲಿ ಆನಂದಪುರವನ್ನು ತೊರೆಯುವುದು ಅವರಿಗೆ ಅನಿವಾರ್ಯವಾಯಿತು. ಸಾಹಿಬ್ಜಾದಾ ಜುಜಾರ್ ಸಿಂಗ್ ತನ್ನ ಹದಿನೈದನೇ ವರ್ಷವನ್ನು ಪೂರೈಸುವುದರಲ್ಲಿದ್ದಾಗ, ಅವರೊಬ್ಬ ಅನುಭವೀ ಯುವ, ಬಲಶಾಲೀ ಮತ್ತು ನಿರ್ಭೀತ ಯೋಧರಾಗಿ ಹೊರಹೊಮ್ಮಿದ್ದರು. ಕುದುರೆಯ ಮೂಲಕ ಪ್ರವಾಹದಿಂದ ತುಂಬಿದ ಸರ್ಸಾ ನದಿಯನ್ನು ಯಶಸ್ವಿಯಾಗಿ ದಾಟಿದ ಪ್ರಮುಖ ಸೇನಾನಿಗಳಲ್ಲಿ ಒಬ್ಬರಾಗಿದ್ದ ಅವರು 6 ಡಿಸೆಂಬರ್ 1705 ರಂದು ರಾತ್ರಿ ವೇಳೆ ಚಮ್ಕೌರ್ ತಲುಪುವಲ್ಲಿ ಸಫಲರಾಗಿದ್ದರು.

ರಾತ್ರಿಯಲ್ಲಿ ಸ್ವಲ್ಪವೇ ವಿಶ್ರಾಂತಿ ಪಡೆದ ಅವರು ಮರುದಿನದ ಯುದ್ಧದಲ್ಲಿ, ಗುರು ಗೋಬಿಂದ್ ಸಿಂಗ್ ಜೀಯವರು ತಮ್ಮ ನಲವತ್ತು ಸಿಖ್ಖರು ಮತ್ತು ಇಬ್ಬರು ಪುತ್ರರೊಂದಿಗೆ ಉಳಿದುಕೊಂಡಿದ್ದ ಗರ್ಹಿಯ ಕೋಟೆ-ಮನೆಯ ಮೇಲೆ ನಡೆದ ಆಕ್ರಮಣವನ್ನು ತಪ್ಪಿಸಲು ಹೋರಾಡಿದರು.

ತಮ್ಮಲ್ಲಿದ್ದ ಮದ್ದುಗುಂಡುಗಳು ಮತ್ತು ಬಾಣಗಳು ಬರಿದಾಗುತ್ತಿದ್ದ ಕಾರಣ ಸಿಖ್ಖರು ತಮ್ಮನ್ನು ಐದು ಗುಂಪುಗಳಾಗಿ ವಿಭಜಿಸಿಕೊಂಡು ಮುತ್ತಿಗೆಕಾರರನ್ನು ನೇರವಾಗಿ ಎದುರಿಸಲು ಒಬ್ಬೊಬ್ಬರಾಗಿ ಹೊರಟರು.

ಗುರು ಗೋಬಿಂದ್ ಸಿಂಗ್ ಜೀಯವರು ಇಬ್ಬರು ಸಾಹಿಬ್ಜಾದಾರನ್ನು ಕೋಟೆಯ ಮೇಲಕ್ಕೆ ಕರೆದೊಯ್ದು ಯುದ್ಧಭೂಮಿಯ ಸಂಪೂರ್ಣ ದೃಶ್ಯವನ್ನು ನೋಡುತ್ತಿದ್ದರು.

ಎದುರಾಳಿಗಳ ಭೀಕರ ದಾಳಿಯನ್ನು ಎದುರಿಸಲು ಸಂಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಸಿಖ್ ಸೈನಿಕರು ತಮ್ಮ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಕೈಗೆತ್ತಿಕೊಂಡರು ಮತ್ತು ಇಬ್ಬರೂ ಸಾಹಿಬ್ಜಾದಾರು ಸಹ ಯುದ್ಧಕ್ಕೆ ಸಿದ್ಧರಾಗಿದ್ದರು.



ಶತ್ರುಗಳ ದೊಡ್ಡ ತುಕಡಿಗೆ ಹೋಲಿಸಿದರೆ ಇವರ ಸಂಖ್ಯೆ ತೀರಾ ಕಡಿಮೆಯಾಗಿತ್ತಾದರೂ, ಅವರ ಮನೋಬಲ ಬಹಳ ಹೆಚ್ಚಾಗಿತ್ತು. ತನ್ಮಧ್ಯೆ ಗುರು ಗೋವಿಂದ್ ಸಿಂಗ್ ಅವರ ಉಪಸ್ಥಿತಿಯಿಂದಾಗಿ ಸೈನಿಕರಲ್ಲಿ ಅಜೇಯ ಧೈರ್ಯವು ತುಂಬಿತ್ತು. ಪರಮಾತ್ಮನ ಆಶೀರ್ವಾದದೊಂದಿಗೆ, ಅವರು ದೃಢತೆ ಮತ್ತು ಧೈರ್ಯದಿಂದ ಶತ್ರುವನ್ನು ಎದುರಿಸಲು ಸಿದ್ಧರಾಗಿದ್ದರು. ಶಾಂತವಾಗಿ ಮತ್ತು ಸಂಪೂರ್ಣ ಏರ್ಪಾಡುಗಳೊಂದಿಗೆ ಗುರು ಸಾಹಿಬ್ ಯುದ್ಧ-ತಂತ್ರವನ್ನು ಎಚ್ಚರಿಕೆಯಿಂದ ಯೋಜಿಸುತ್ತಿದ್ದರು.

ಯುದ್ಧಭೂಮಿಯಲ್ಲಿ ತನ್ನ ಅಣ್ಣನ ಕೆಚ್ಚೆದೆಯ ತ್ಯಾಗವನ್ನು ನೋಡಿದ ಕೇವಲ ೧೫ ವರ್ಷ ಸಾಹಿಬ್ಜಾದಾ ಜುಜಾರ್ ಸಿಂಗ್ ಅವರು ತನ್ನ ಸಹೋದರನ ಹೆಜ್ಜೆಗಳನ್ನು ಅನುಸರಿಸಲು ತನಗೂ ಅವಕಾಶ ನೀಡುವಂತೆ ತನ್ನ ತಂದೆಯನ್ನು ಕೇಳಿಕೊಂಡರು. ಗುರು ಗೋಬಿಂದ್ ಸಿಂಗ್ ಜೀಯವರು ತಮ್ಮ ಮಕ್ಕಳನ್ನು ಪೂರ್ಣ ಇಚ್ಛೆಯೊಂದಿಗೆ ಮತ್ತು ಹರ್ಷಚಿತ್ತದಿಂದ ಸತ್ಯಕ್ಕಾಗಿ ಹೋರಾಡಲು ಕಳುಹಿಸಿದರು. ಅತ್ಯಂತ ಕ್ರೂರ ಆಡಳಿತಗಾರರು ಮತ್ತು ಇತರ ಪಟ್ಟಭದ್ರ ಹಿತಾಸಕ್ತಿಗಳ ಅಧೀನತೆಯ ಕಠಿಣ ಪರಿಸ್ಥಿತಿಯಲ್ಲಿದ್ದರೂ, ಸತ್ಯಕ್ಕಾಗಿ ಮತ್ತು ಪೀಡಿತ ಮಾನವೀಯತೆಗಾಗಿ ನಡೆದ ಈ ವಿಶಿಷ್ಟ ಹೋರಾಟದ ಉದಾಹರಣೆಗೆ ಸಮಾನವಾದ ಘಟನೆ ವಿಶ್ವ ಇತಿಹಾಸದಲ್ಲಿ ಇನ್ನೊಂದಿಲ್ಲ.

7 ಡಿಸೆಂಬರ್ 1705 ರ ಸಂಜೆ ವೇಳೆಗೆ ಸಾಹಿಬ್ಜಾದಾ ಜುಜಾರ್ ಸಿಂಗ್ ತಮ್ಮ ಕೊನೆಯ ನೇತೃತ್ವ ವಹಿಸಿದ್ದರು. ಮಹಾದ್ವಾರದ ಮೂಲಕ ಹೊರಬಂದು ಶತ್ರುಗಳಿಗೆ ಸವಾಲನ್ನೊಡ್ಡುತ್ತಾ, ಅವರು ಹೊರಡಿಸಿದ "ಸತ್ ಶ್ರೀ ಅಕಾಲ್" ಎಂಬ ಘೋಷಣೆಯು ಎಲ್ಲೆಡೆಗೂ ಪ್ರತಿಧ್ವನಿಸಿತು. ಗುರು ಗೋಬಿಂದ್ ಸಿಂಗ್ ಅವರು ತಮ್ಮ ಎರಡನೆಯ ಮಗನನ್ನೂ ಈ ದೇಶಕ್ಕಾಗಿ, ದೇಶದ ಪ್ರಜೆಗಳಿಗಾಗಿ ಅರ್ಪಿಸಿ ಮಾಡಿದ ತ್ಯಾಗವನ್ನು ಕಂಡ ಶತ್ರು ಸೈನಿಕರು ಸಂಪೂರ್ಣವಾಗಿ ಆಶ್ಚರ್ಯಚಕಿತರಾದರು. ಅವರು ಪೂರ್ಣ ಬಲದೊಂದಿಗೆ ಮುನ್ನಡೆದಿದ್ದರು. ಸಾಹಿಬ್ಜಾದಾ ಮತ್ತು ಅವರ ಜೊತೆಗಾರ ಸಿಖ್ಖರು ತಮ್ಮ ಎಲ್ಲಾ ಶಕ್ತಿಯನ್ನು ಪ್ರಯೋಗಿಸುತ್ತಾ ಶತ್ರುಗಳನ್ನು ಎದುರಿಸಿದರು. ಸೂರ್ಯಾಸ್ತವಾಗುತ್ತಿದ್ದಂತೆ, ಸಾಹಿಬ್ಜಾದಾ ಜುಜಾರ್ ಸಿಂಗ್ ಹೋರಾಡುತ್ತಲೇ ಈಹಿಂದೆ ತನ್ನ ಅಣ್ಣ ಬಿದ್ದಿದ್ದ ಸ್ಥಳದ ಬಳಿಯಲ್ಲೇ ತಮ್ಮ ಪ್ರಾಣವನ್ನೂ ಅರ್ಪಿಸಿದರು.

ಗುರು ಗೋಬಿಂದ್ ಸಿಂಗ್ ಜೀಯವರು ಕೋಟೆಯ ಮೇಲಿನಿಂದ ತಮ್ಮ ಕೆಚ್ಚೆದೆಯ ಪುತ್ರರ ವೀರ ಹೋರಾಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವರ ತ್ಯಾಗವನ್ನು ಕಂಡ ಗುರೂಜಿಯವರು ಕೃತಜ್ಞತಾಭಾವದಿಂದ ಸರ್ವಶಕ್ತ ಪರಮಾತ್ಮನಿಗೆ ತಲೆಬಾಗಿಸಿ ನಮಿಸಿದರು.

# ಕಿರಿಯ ಸಾಹಿಬ್ಜಾದಾ



## ಸಾಹಿಬ್ಜಾದಾ ಜೋರಾವರ್ ಸಿಂಗ್
## ಸಾಹಿಬ್ಜಾದಾ ಫತೇ ಸಿಂಗ್

ಗುರು ಗೋಬಿಂದ್ ಸಿಂಗ್ ಜೀಯವರ ಮೂರನೇ ಮಗ ಸಾಹಿಬ್ಜಾದಾ ಜೋರಾವರ್ ಸಿಂಗ್, ಮಾತಾ ಜೀತೋ ಜೀಯವರಿಗೆ ಆನಂದಪುರದಲ್ಲಿ 17 ನವೆಂಬರ್ 1696 ರಂದು ಜನಿಸಿದರು. 1705 ರ ಡಿಸೆಂಬರ್ 5-6 ರ ರಾತ್ರಿ ಆನಂದಪುರವನ್ನು ಬಿಟ್ಟು ಹೊರಟಾಗ ಅವರಿಗೆ ಕೇವಲ ಒಂಬತ್ತು ವರ್ಷ ವಯಸ್ಸಾಗಿತ್ತು.

೫ ಡಿಸೆಂಬರ್ ೧೭೦೦ ರಂದು ಮಾತಾ ಜೀತೋ ಜೀಯವರು ಮರಣ ಹೊಂದಿದ ನಂತರ, ಅವರ ಅಜ್ಜಿ (ಗುರು ತೇಗ್ ಅವರ ಬಹದರ್ ಜೀಯವರ ಪತ್ನಿ) ಮಾತಾ ಗುಜರೀ ಜೀಯವರು ಯುವ ಜೋರಾವರ್ ಸಿಂಗ್ ಮತ್ತು ಅವರ ಎಳೆಯ ಸಹೋದರ ೨೫ ಫೆಬ್ರವರಿ ೧೬೯೯ ರಂದು ಜನಿಸಿದ ಫತೇ ಸಿಂಗ್-ನೊಂದಿಗೆ ಗಾಢವಾಗಿ ಹೊಂದಿಕೊಂಡರು.

ಆನಂದಪುರ್ ಸಾಹಿಬ್ನಿಂದ ತುಕಡಿಯು ಹೊರಹೊರಟಿದ್ದರಿಂದ ಮಾತಾ ಗುಜರೀ ಜೀಯವರು ಎರಡೂ ಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡರು. ನಂತರ ಕುದುರೆಯನ್ನೇರಿ ಭೋರ್ಗರೆಯುತ್ತಿದ್ದ ಸರಸಾ ನದಿಯನ್ನು ದಾಟುವ ವೇಳೆ, ಈ ಮೂವರೂ ಗುರು ಗೋಬಿಂದ್ ಸಿಂಗ್

ಜೀಯವರಿಂದ ಬೇರ್ಪಟ್ಟರು. ಅವರು ದಟ್ಟವಾದ ಕಾಡುಗಳು ಮತ್ತು ಕಷ್ಟಕರವಾದ ಭೂಪ್ರದೇಶಗಳ ಮೂಲಕ ಹಾದುಹೋಗುತ್ತಿದ್ದರು. ದಾರಿಯಲ್ಲಿ ಅವರಿಗೆ ಅನೇಕ ಕಾಡು ಪ್ರಾಣಿಗಳು ಅಡ್ಡ ಬಂದರೂ, ಧೈರ್ಯಶಾಲಿ ಸಾಹಿಬ್ಜಾದಾ ಸಹೋದರರು ತಮ್ಮ ಅಜ್ಜಿಯೊಂದಿಗೆ ಗುರ್ಬಾನಿಯನ್ನು ಪಠಿಸುತ್ತಾ ನಿರ್ಭಯವಾಗಿ ಮುನ್ನಡೆದು ಸಾಗುತ್ತಿದ್ದರು. ಅಜ್ಜಿಯು ಅವರಿಗೆ ಸಿಖ್ ಇತಿಹಾಸದ ಕಥೆಗಳನ್ನು ವಿವರಿಸುತ್ತಾ ಸಾಗಿದ್ದರಿಂದ ಅವರ ಪ್ರಯಾಣವು ಸುಖದಾಯಕವಾಗಿತ್ತು.

ಹೊಳೆಯನ್ನು ದಾಟುವಲ್ಲಿ ಯಶಸ್ವಿಯಾದ ಗಂಗೂ ಎನ್ನುವ ಅವರ ಅಡುಗೆಯವನು ಅವರನ್ನು ಈಗಿನ ರೋಪರ್ಜಿಲ್ಲೆಯ ಮೊರಿಂಡಾ ಸಮೀಪದ ಈಗ ಸಹೇರಿ ಎಂದು ಕರೆಯಲ್ಪಡುವ ಖೇರಿ ಗ್ರಾಮದಲ್ಲಿದ್ದ ತನ್ನ ಮನೆಗೆ ಕರೆದೊಯ್ದನು. ಕುದುರೆಯ ಜೀನು ಬಿಡಿಸುತ್ತಿದ್ದಾಗ ತಡಿ-ಚೀಲದಲ್ಲಿ ಸ್ವಲ್ಪ ಹಣ ಇರುವುದನ್ನು ಅವನು ಕಂಡನು. ಇದು ಅವನನ್ನು ವಿಶ್ವಾಸಘಾತುಕತನಕ್ಕೆ ಪ್ರಚೋದಿಸಿತು. ಅವನು ರಾತ್ರಿ ವೇಳೆ ತಡಿ ಕದ್ದಿದ್ದು ಮಾತ್ರವಲ್ಲದೆ, ಪರಾರಿಯಾದವರ ಮಾಹಿತಿಯನ್ನು ಸರ್ಕಾರಕ್ಕೆ ನೀಡಿ ಬಹುಮಾನ ಗಳಿಸುವ ಯೋಜನೆಯನ್ನೂ ರೂಪಿಸಿದ್ದನು.

ಗುರು ಮತ್ತು ಅವರ ಕುಟುಂಬದ ಸದಸ್ಯರ ಬಂಧನಕ್ಕೆ ಸಹಕರಿಸಿದವರಿಗೆ ಪುರಸ್ಕಾರವನ್ನು ನೀಡಲಾಗುವುದು ಎಂಬ ಸಿರ್ಹಿಂದ್ ನವಾಬನ ಘೋಷಣೆಯನ್ನೂ ಅವನು ಕೇಳಿದ್ದನು. ಗುರುವಿನ ಕುಟುಂಬದ ಸದಸ್ಯರಿಗೆ ಅವನ ಮನೆಯಲ್ಲಿ ಆಶ್ರಯ ನೀಡಿರುವುದು ಮತ್ತು ಪುರಸ್ಕಾರದ ಆಮಿಷ - ಇವೆರಡರ ನಡುವೆ ಉಂಟಾದ ತಳಮಳದಿಂದ ಅವನ ಮನಸ್ಸಿನಲ್ಲಿ ಆತಂಕವು ಹುಟ್ಟಿಕೊಂಡಿತು. ಅವರ ಬಂಧನಕ್ಕೆ ಕಾರಣವಾಗುವುದೋ, ಅಥವಾ ಏನೇ ಆದರೂ ಗುರುವಿಗೆ ನಿಷ್ಠರಾಗಿ ಉಳಿಯುವುದೋ ಎನ್ನುವ ಯೋಚನೆಗೆ ಅವನು ಗುರಿಯಾದನು. ಅಂತಿಮವಾಗಿ ಅವನು ದುರಾಸೆಗೊಳಗಾಗಿ ಮೊರಿಂಡಾದ ರಂಗರ್ ಅಧಿಕಾರಿಗಳನ್ನು ತನ್ನ ಮನೆಗೆ ಕರೆತಂದನು.

7 ಡಿಸೆಂಬರ್ 1705 ರ ಬೆಳಿಗ್ಗೆ, ಚಮ್ಕೌರ್ ಯುದ್ಧದ ದಿನ ಸಾಹಿಬ್ಜಾದಾ ಜೋರಾವರ್ ಸಿಂಗ್, ಸಾಹಿಬ್ಜಾದಾ ಫತೇ ಸಿಂಗ್ ಮತ್ತು ಅವರ ಅಜ್ಜಿ ಮಾತಾ ಗುಜರೀ ಜೀ ಅವರನ್ನು ಮೊರಿಂಡಾದಲ್ಲಿ ಅಧಿಕಾರಿಗಳಾದ ಜಾನಿ ಖಾನ್ ಮತ್ತು ಮಣಿ ಖಾನ್ ರಂಗರ್ ಅವರು ವಶಕ್ಕೆ ತೆಗೆದುಕೊಂಡರು. ಈ ಮೂವರನ್ನೂ ರಾತ್ರಿ ಕೊತ್ವಾಲಿ (ಪೊಲೀಸ್ ಠಾಣೆ) ಯಲ್ಲಿ ಇಡಲಾಯಿತು.

ಸಾಹಿಬ್ಜಾದಾ ಸಹೋದರರಿಬ್ಬರೂ ಸಿಖ್ಖರ ಶೌರ್ಯದ ಕಥೆಗಳನ್ನು ಮತ್ತು ಮೊದಲನೇ ಗುರು ಅರ್ಜನ್ ದೇವ್ ಜೀ ಹಾಗೂ ಗುರು ತೇಜ್ ಬಹದರ್ ಜೀ ಅವರ ಅನುಪಮ ಬಲಿದಾನದ ಕಥೆಗಳನ್ನೂ ತಮ್ಮ ಆತ್ಮೀಯ ಮತ್ತು ಪ್ರೀತಿಯ ಅಜ್ಜಿಯಿಂದ ಕೇಳಿ ತಿಳಿದುಕೊಂಡರು. ಮರುದಿನ ಅವರನ್ನು ಸಿರ್ಹಿಂದ್ಗೆ ಕಳುಹಿಸಲಾಯಿತು. ಅವರ ಬಂಧನದ ಸುದ್ದಿ ಎಲ್ಲೆಡೆ ಹರಡುತ್ತಿದ್ದಂತೆ ದಾರಿಯುದ್ದಕ್ಕೂ ಅಪಾರ ಜನಸಮೂಹವೇ ಜಮಾಯಿಸಿತ್ತು.

ಅಮಾಯಕ ಸಣ್ಣ ಬಾಲಕರನ್ನು ಅವರ ಅಜ್ಜಿಯೊಂದಿಗೆ ಬಂಧಿಸಲಾಗಿದೆ ಎಂಬುದನ್ನು ತಿಳಿದ ಜನರು ಆಶ್ಚರ್ಯಚಕಿತರಾದರು. ಯುವ ಸಾಹಿಬ್ಜಾದಾ ಸಹೋದರರ ನಿರ್ಭೀತ ನೋಟವು ಜನರ ಮೆಚ್ಚುಗೆಯನ್ನು ಪಡೆಯಿತು ಮತ್ತು ಜನರು "ಧೈರ್ಯಶಾಲಿ ತಂದೆಯ ಕೆಚ್ಚೆದೆಯ ಪುತ್ರರು" ಎಂಬುದಾಗಿ ಘೋಷಣೆಯಿತ್ತರು.


ಸಿರ್ಹಿಂದ್ಗೆ ಆಗಮಿಸಿದಾಗ, ಅವರನ್ನು ಕೋಟೆಯಲ್ಲಿದ್ದ ರಾತ್ರಿಯ ತಣ್ಣನೆ-ಗೋಪುರದಲ್ಲಿ (ಥಂಡಾ ಬುರ್ಜ್) ಇರಿಸಲಾಯಿತು. ಗುರು ಸಾಹಿಬ್ನ ಭಕ್ತನಾಗಿದ್ದ, ನೀರು ಹೊರುವ ಕೆಲಸವನ್ನು ಮಾಡುತ್ತಿದ್ದ ಭಾಯಿ ಮೋಟಿ ಎಂಬವನು ಇಬ್ಬರು ಸಾಹಿಬ್ಜಾದಾಗಳು ತಮ್ಮ ಅಜ್ಜಿಯೊಂದಿಗೆ ಹಸಿವಿನಿಂದ ಚಳಿಯಲ್ಲಿ ಮಲಗಿದ್ದಾರೆ ಎಂದು ತಿಳಿದೊಡನೆ ರಾಜಪರಿವಾರಕ್ಕೆ ಆಗಬಹುದಾದ ಅಸಮಾಧಾನವನ್ನೂ ಲೆಕ್ಕಿಸದೆ ತನ್ನ ಜೀವಕ್ಕೆ ಬಹಳ ದೊಡ್ಡ ಅಪಾಯವಿದೆ ಎಂಬುದನ್ನು ಅರಿತುಕೊಂಡೇ ಯುವ ಸಾಹಿಬ್ಜಾದಾ ಸಹೋದರರಿಗೆ ಹಾಲು ನೀಡಿ ಅವರ ಹಸಿವನ್ನು ತಣಿಸಿದನು. ಹಾಲನ್ನು ನೀಡಿದ್ದಕ್ಕಾಗಿ, ನಂತರ ಅವನು ಮತ್ತು ಅವನ ಕುಟುಂಬಕ್ಕೆ ಜೀವಂತವಾಗಿ ಕೊಹ್ಲು (ಕ್ರಷರ್) ಮೂಲಕ ಅರೆದು ಕೊಲ್ಲುವ ಶಿಕ್ಷೆಯನ್ನು ವಿಧಿಸಲಾಯಿತು.

9 ಡಿಸೆಂಬರ್ 1705 ರಂದು, ಇಬ್ಬರು ಸಾಹಿಬ್ಜಾದಾಗಳನ್ನು ಫೌಜ್ದಾರ್ ನವಾಬ್ ವಜೀರ್ ಖಾನ್ ಮುಂದೆ ಹಾಜರುಪಡಿಸಲಾಯಿತು. ಫೌಜ್ದಾರ್ ನವಾಬ್ ವಜೀರ್ ಖಾನ್ ತನ್ನ ಊಳಿಗ ಮಿತ್ರನಾಗಿದ್ದ ಮಲೇರಕೋಟ್ಲಾದ ನವಾಬ್ ಶೇರ್ ಮುಹಮ್ಮದ್ನೊಂದಿಗೆ ಆಗಷ್ಟೇ ಚಾಮಕೌರ್ನಿಂದ ಹಿಂದಿರುಗಿದ್ದನು. ವಜೀರ್ ಖಾನ್ ಇಬ್ಬರು ಸಾಹಿಬ್ಜಾದಾರನ್ನು ಸಂಪತ್ತು ಮತ್ತು ಗೌರವಗಳ ಭರವಸೆಯೊಂದಿಗೆ ಇಸ್ಲಾಂ ಧರ್ಮ ಸ್ವೀಕರಿಸುವಂತೆ ಆಮಿಷವೊಡ್ಡಲು ಪ್ರಯತ್ನಿಸಿದನು. ಆದರೆ ಅವರು ಅವನ ಈ ಸಲಹೆಯನ್ನು ತಿರಸ್ಕರಿಸಿದರು.

ನಂತರ ಅವರಿಗೆ ಜೀವ ಬೆದರಿಕೆಯನ್ನು ಹಾಕಲಾಯಿತು. ಆದರೆ ಅವರು ಇದಕ್ಕೂ ಮಣಿಯಲಿಲ್ಲ. ಅಂತಿಮವಾಗಿ ಮರಣದಂಡನೆಯನ್ನು ಘೋಷಿಸಲಾಯಿತು. ಶೇರ್ ಮುಹಮ್ಮದ್ ಖಾನ್ ಈ ಶೀತಲರಕ್ತದ ಮುಗ್ಧ ಬಾಲಕರ ಹತ್ಯೆಯನ್ನು ತೀವ್ರವಾಗಿ ಪ್ರತಿಭಟಿಸಿದನು ಮತ್ತು ಈರೀತಿಯ ಅಮಾನವೀಯ ಕೃತ್ಯವನ್ನು ಮಾಡದಂತೆ ವಜೀರ್ ಖಾನ್ ಬಳಿ ಕೇಳಿಕೊಂಡನು. ವಜೀರ್ ಖಾನ್ ಅವರ ಮಂತ್ರಿಯಾಗಿದ್ದ ಸುಚಾ ನಂದ್ ತನ್ನ ಸ್ವಾಮಿನಿಷ್ಠೆಯನ್ನು ಸಾಬೀತುಪಡಿಸಲು ಮತ್ತು ಯಜಮಾನನ ಮನಸ್ಸನ್ನು ಓಲೈಸುವುದಕ್ಕಾಗಿ ಅತ್ಯುತ್ಸಾಹದಿಂದ ವರ್ತಿಸಿದನು. ಅವನು ದುಷ್ಟರನ್ನು ಮೊಗ್ಗಿನಲ್ಲೇ ಚಿವುಟಿ ಹಾಕುವುದೇ ಜಾಣತನ ಎಂಬ ಭಾವನೆಯೊಂದಿಗೆ ಕೂಡಲೇ ಇಬ್ಬರೂ ಸಾಹಿಬ್ಜಾದಾ ಸಹೋದರರನ್ನು ಗಲ್ಲಿಗೇರಿಸುವಂತೆ ಸಲಹೆ ನೀಡಿದನು. ಆದರೆ ಶೇರ್ ಮುಹಮ್ಮದ್ ಖಾನ್-ನ ಮಧ್ಯಸ್ಥಿಕೆಯಿಂದಾಗಿ ಅವರಿಬ್ಬರಿಗೂ ಮತಾಂತರಗೊಳ್ಳುವ ಸಲಹೆಯ ಬಗ್ಗೆ

ಯೋಚಿಸಲು ಇನ್ನೂ ಸ್ವಲ್ಪ ಸಮಯವನ್ನು ನೀಡಿದ್ದರಿಂದ ಮುಗ್ಧ ಮಕ್ಕಳ ಪ್ರಾಣ ಉಳಿಯಲು ಕಾರಣವಾಯಿತು.

ಸಾಹಿಬ್ಜಾದಾ ಜೋರಾವರ್ ಸಿಂಗ್ ಮತ್ತು ಅವರ ಸಹೋದರ ಹ್ಯಾಚ್ ಸಿಂಗ್ ತೀವ್ರ ಚಳಿಗಾಲದ ಇನ್ನೂ ಎರಡು ದಿನಗಳನ್ನು ಕೋಲ್ಡ್ ಟವರ್ನಲ್ಲಿ ತಮ್ಮ ವಯೋವೃದ್ಧ ಅಜ್ಜಿಯ ಮಡಿಲಲ್ಲಿ ಕಳೆದರು. ಮರುದಿನ, ದರ್ಬಾರಿಗೆ ಹೊರಡುವ ಮೊದಲು ಮಾತಾ ಗುಜರೀ ಜೀಯವರು ತನ್ನ ಮೊಮ್ಮಕ್ಕಳನ್ನು ಅಪ್ಪಿಕೊಂಡು, ಆಶೀರ್ವದಿಸುತ್ತಾ ಗುರು-ಸಂಪ್ರದಾಯದ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದಳು. ಇಬ್ಬರೂ ಸಾಹಿಬ್ಜಾದಾಗಳು ಹಾಗೆಯೇ ಮಾಡುವುದಾಗಿ ಪ್ರತಿಜ್ಞೆ ಮಾಡಿ ಹರ್ಷಚಿತ್ತದಿಂದ ಹೊರಟರು. ಅವರನ್ನು ನವಾಬನ ದರ್ಬಾರಿಗೆ ಕರೆದೊಯ್ಯಲಾಯಿತು. ಅವರು ದರ್ಬಾರನ್ನು ತಲುಪಿದಾಗ ಅಲ್ಲಿದ್ದ ದೊಡ್ಡ ಗೇಟ್ ಮುಚ್ಚಿರುವುದನ್ನು ಮತ್ತು ಒಳಗೆ ಪ್ರವೇಶಿಸಲು ಒಂದು ಸಣ್ಣ ಕಿಟಕಿ ಮಾತ್ರವೇ ಇರುವುದನ್ನು ಗಮನಿಸಿದರು. ಬುದ್ಧಿವಂತ ಸಾಹಿಬ್ಜಾದಾ ಸಹೋದರರು ಕಪಟದ ಈ ಆಟವನ್ನು ಅರ್ಥಮಾಡಿಕೊಂಡರು. ಅವರು ತಮ್ಮ ಪಾದಗಳನ್ನು ಮುಂದಕ್ಕೆ ಹಾಕಿ ತಲೆ ಬಗ್ಗಿಸದೆಯೇ ಕಿಟಕಿಯ ಮೂಲಕ ಒಳಕ್ಕೆ ಹಾರಿದರು. ಒಳಗೆ ಕಾಲಿಡುತ್ತಿದ್ದಂತೆ ಅವರು ಸಿಖ್ ವಂದನೆಯೊಂದಿಗೆ ಆಸ್ಥಾನಿಕರನ್ನು ಅಭಿನಂದಿಸಿದರು.



**ವಹಿಗುರು ಜೀಯವರ ಖಾಲ್ಸಾ. ವಹಿಗುರು ಜೀಯವರ ಫತೇಹ್.**

**ಖಾಲ್ಸಾ ದೇವರ ಆಸ್ತಿ. ಜಯ ದೇವರಿಗೆ ಸೇರಿದ್ದು.**

ಅವರ ಈ ನಿರ್ಭೀತ ನಡವಳಿಕೆಯಿಂದ ಎಲ್ಲಾ ಆಸ್ಥಾನಿಕರು ಬಹಳ ಪ್ರಭಾವಿತರಾದರು. ಸಹೋದರರಿಬ್ಬರೂ ತಮ್ಮ ನಿಯಂತ್ರಣಕ್ಕೆ ಬಂದರೆ, ಅವರು ಕೇಳುವ ಏನನ್ನಾದರೂ ಅವರಿಗೆ ನೀಡುವುದಾಗಿ ನವಾಬ್ ವಜೀರ್ ಖಾನ್ ಆಹ್ವಾನವಿತ್ತನು. ಇಬ್ಬರೂ ಸಾಹಿಬ್ಜಾದಾರು ಒಂದೇ ಧ್ವನಿಯಲ್ಲಿ "ನಮಗೆ ಲೌಕಿಕ ಸಂಪತ್ತಿನ ಬಗ್ಗೆ ಆಸಕ್ತಿಯಿಲ್ಲ. ನಾವು ನಮ್ಮ ಧರ್ಮವನ್ನು ಯಾವುದೇ ಕಾರಣಕ್ಕೂ ತ್ಯಜಿಸುವುದಿಲ್ಲ" ಎಂಬುದಾಗಿ ಕೂಗಿದರು. ನವಾಬನು ಮತ್ತೊಮ್ಮೆ ಅವರ ಮನವೊಲಿಸಲು ಪ್ರಯತ್ನಿಸುತ್ತಾ "ನೀವಿನ್ನೂ ಚಿಕ್ಕವರು ಮತ್ತು ಮುಗ್ಧರು. ಇದು ನೀವು ಸಂತೋಷ ಮತ್ತು ವಿನೋದದಿಂದ ಕಳೆಯಬೇಕಾದ ವಯಸ್ಸು. ನೀವು ನಮ್ಮ ಸಲಹೆಯನ್ನು ಕೇಳಿದರೆ, ಮನಸೋ ಇಚ್ಛೆಯಂತೆ ಈ ಜಗತ್ತಿನಲ್ಲಿ ನಿಮ್ಮ ಜೀವನವನ್ನು ಆನಂದಿಸಿ ತೃಪ್ತರಾಗುವಿರಿ ಮತ್ತು ಸ್ವರ್ಗದಲ್ಲಿ ವೈಭವಯುತ ಜೀವನವನ್ನು ಪಡೆಯುವಿರಿ" ಎಂದು ಹೇಳಿದನು.

ಆದರೆ ಯುವ ಸಾಹಿಬ್ಜಾದಾ ಸಹೋದರರು ತಮ್ಮ ಧರ್ಮದ ರಕ್ಷಣೆಗಾಗಿ ಸಕಲ ತ್ಯಾಗಕ್ಕೂ ಸಿದ್ಧರಾಗಿದ್ದರು. ಸಾಹಿಬ್ಜಾದಾ ಜೋರಾವರ್ ಸಿಂಗ್ ನಿರ್ಭೀತಿಯಿಂದ ಮಾತನಾಡುತ್ತಾ, "ನಾವು



ದೌರ್ಜನ್ಯ ಮತ್ತು ಅನ್ಯಾಯದ ವಿರುದ್ಧ ಹೋರಾಡುತ್ತಿದ್ದೇವೆ. ನಾವು ಗುರು ಗೋಬಿಂದ್ ಸಿಂಗ್ ಅವರ ಮಕ್ಕಳು, ಗುರು ತೇಜ್ ಬಹದರ್ ಜೀಯವರ ಮೊಮ್ಮಕ್ಕಳು ಮತ್ತು ಗುರು ಅರ್ಜನ್ ದೇವ್ ಜೀಯವರ ವಂಶಸ್ಥರು. ನಾವು ಅವರ ಹೆಜ್ಜೆಗಳನ್ನು ಅನುಸರಿಸುತ್ತೇವೆ. ನಾವು ನಮ್ಮ ಧರ್ಮದ ರಕ್ಷಣೆಗಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧರಿದ್ದೇವೆ" ಎಂದನು.

ದರ್ಬಾರಿನ ಅಧಿಕಾರಿಗಳಲ್ಲಿ ಒಬ್ಬನಾದ ದಿವಾನ್ ಸುಚಾ ನಂದ್ ಸಾಹಿಬ್ಜಾದಾರ ಬಳಿಗೆ ಬಂದು "ನಿಮ್ಮನ್ನು ಬಿಡುಗಡೆಗೊಳಿಸಿದರೆ ಎಲ್ಲಿಗೆ ಹೋಗುತ್ತೀರಾ?" ಎಂದು ಕೇಳಿದನು.

ಸಾಹಿಬ್ಜಾದಾ ಜೋರಾವರ್ ಸಿಂಗ್ ಹೇಳಿದರು, "ನಾವು ಕಾಡಿಗೆ ಹೋಗುತ್ತೇವೆ, ಕೆಲವು ಸಿಖ್ಖರನ್ನು ಒಗ್ಗೂಡಿಸಿಕೊಂಡು, ಒಳ್ಳೆಯ ಕುದುರೆಗಳನ್ನು ಪಡೆದು ಯುದ್ಧಭೂಮಿಯಲ್ಲಿ ನಿಮ್ಮನ್ನು ಮತ್ತು ನಿಮ್ಮ ಸೈನ್ಯವನ್ನು ಎದುರಿಸಲು ಹಿಂತಿರುಗಿ ಬರುತ್ತೇವೆ".

ಅವರ ಉತ್ತರದಿಂದ ದಿವಾನ್ ಸುಚಾ ನಂದ್ ಆಶ್ಚರ್ಯಗೊಂಡು ನವಾಬನಿಗೆ ಹೇಳಿದನು, "ನವಾಬರೇ...! ಈ ಧೀರ ಮಕ್ಕಳು ಬೆಳೆದು ದೊಡ್ಡವರಾದಾಗ ಸರ್ಕಾರದ ವಿರುದ್ಧ ಬಂಡಾಯವೇಳುತ್ತಾರೆ. ಆದ್ದರಿಂದ, ಅವರಿಗೆ ಶಿಕ್ಷೆಯಾಗಲೇಬೇಕು ಮತ್ತು ಯಾವುದೇ ಕಾರಣಕ್ಕೂ ಅವರನ್ನು ಬಿಡುಗಡೆ ಮಾಡಬಾರದು".

ಇಬ್ಬರೂ ಸಾಹಿಬ್ಜಾದಾರು ಸ್ಥಿರಪ್ರಜ್ಞರಾಗಿದ್ದು, ಒಬ್ಬರಿಗೊಬ್ಬರು ಪರಸ್ಪರ ನಿರ್ಭಯವಾಗಿ ಮಾತನಾಡುತ್ತಿದ್ದರು ಮತ್ತು ದರ್ಬಾರಿನ ನ್ಯಾಯ-ಪ್ರಕ್ರಿಯೆಗಳ ಬಗ್ಗೆ ಯಾವುದೇ ಕಾಳಜಿಯನ್ನು ಹೊಂದಿರಲಿಲ್ಲ. ಇದು ಅವರ ಜೀವನ್ಮರಣದ ಪ್ರಶ್ನೆಯಾಗಿದ್ದರೂ ಅವರ ಮುಖದಲ್ಲಿ ಯಾವುದೇ ಆತಂಕ ಅಥವಾ ಭಯವು ಇಲ್ಲದೇ ಇರುವುದನ್ನು ಕಂಡ ಆಸ್ಥಾನಿಕರು ತುಂಬಾ ಆಶ್ಚರ್ಯಚಕಿತರಾಗಿದ್ದರು. ಇನ್ನೂ ಅಚಲರಾಗಿದ್ದ ಅವರನ್ನು ೧೧ ಡಿಸೆಂಬರ್ ೧೭೦೫ ರಂದು ನಾಲ್ಕು ಗೋಡೆಗಳ ನಡುವೆ ಜೀವಂತವಾಗಿ ಮುಚ್ಚಲು ಆದೇಶಿಸಲಾಯಿತು. ಅವರಿಬ್ಬರೂ ಶಿಕ್ಷೆಯನ್ನು ತಟಸ್ಥ ಭಾವನೆಯಿಂದ ಕೇಳಿಸಿಕೊಂಡರು. ಆದರೂ, ಆಸ್ಥಾನಿಕರು ತೀರ್ಪನ್ನು ಕೇಳಿ ಆಶ್ಚರ್ಯಚಕಿತರಾದರು. ದರ್ಬಾರಿನಲ್ಲಿ ಹಾಜರಿದ್ದ ಮಲೇರಕೋಟ್ಲಾದ ಮುಖ್ಯಸ್ಥನಾಗಿದ್ದ ನವಾಬ್ ಶೇರ್ ಮುಹಮ್ಮದ್ ಖಾನ್ ಈ ಮರಣದಂಡನೆಯ ವಿರುದ್ಧ ಮನವಿ ಮಾಡುತ್ತಾ "ಈ ಬಾಲಕರು ತುಂಬಾ ಚಿಕ್ಕವರು ಎಂಬ ಕಾರಣಕ್ಕಾಗಿ ಈರೀತಿಯ ಶಿಕ್ಷೆಯನ್ನು ವಿಧಿಸಬಾರದು. ಅವರ ತಂದೆಯು ನಡೆಸಿದ ಚಟುವಟಿಕೆಗಳಿಗೆ ಮಕ್ಕಳು ಜವಾಬ್ದಾರರಾಗಿರುವುದಿಲ್ಲ" ಎಂದು ಹೇಳಿದನು.

**ಆದಾಗ್ಯೂ, ನವಾಬ್ ವಜೀರ್ ಖಾನ್ ಈ ಆಕ್ಷೇಪಣೆಯನ್ನು ತಳ್ಳಿಹಾಕಿದನು.**

ತದನಂತರ ಸಾಹಿಬ್ಜಾದಾರನ್ನು ಗೋಪುರಕ್ಕೆ ಹಿಂತಿರುಗಿಸಲಾಯಿತು. ಅವರು ದರ್ಬಾರಿನಲ್ಲಿ ನಡೆದ ಪ್ರಕ್ರಿಯೆಗಳ ಕುರಿತು ತಮ್ಮ ಅಜ್ಜಿಗೆ ವರದಿಯನ್ನು ನೀಡಿದರು. ಅವಳು ತನ್ನ ಮೊಮ್ಮಕ್ಕಳನ್ನು ಅಪ್ಪಿಕೊಂಡಳು, ಅವರು ತೋರಿಸಿದ ಧೈರ್ಯ ಮತ್ತು ದಿಟ್ಟ ನಿಲುವನ್ನು ಕೇಳಿ ಅವರ ಬೆನ್ನು ತಟ್ಟಿದಳು. “ನೀವು ನಿಮ್ಮ ಪೂಜ್ಯ ಅಜ್ಜ ಮತ್ತು ನಿಮ್ಮ ಧೀರ ತಂದೆಯ ಘನತೆ ಮತ್ತು ಗೌರವವನ್ನು ಸರಿಯಾಗಿ ಎತ್ತಿಹಿಡಿದಿದ್ದೀರಿ. ದೇವರು ಸದಾ ನಿಮ್ಮೊಂದಿಗಿರಲಿ” ಎಂದು ಹೇಳುತ್ತಾ ಅವರನ್ನು ಪ್ರೋತ್ಸಾಹಿಸಿದಳು.

ಮರುದಿನ ಅವರನ್ನು ಪುನಃ ನವಾಬನ ದರ್ಬಾರಿಗೆ ಕರೆದೊಯ್ಯಲಾಯಿತು. ನವಾಬನು ಮತ್ತೊಮ್ಮೆ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆ ಅವರಿಗೆ ತಿಳಿಸಿದನು. ಸಾಹಿಬ್ಜಾದಾ ಇಬ್ಬರೂ ನಿರ್ಭೀತಿಯಿಂದ “ಪರಿಣಾಮಗಳು ಏನೇ ಇದ್ದರೂ ಸರಿಯೇ, ನಾವು ಎಂದಿಗೂ ನಮ್ಮ ಧರ್ಮವನ್ನು ಬಿಡುವುದಿಲ್ಲ. ಸಾವು ಎಂಬುದು ನಮಗೆ ಅರ್ಥವಿಲ್ಲದ ಶಬ್ದ” ಎಂದು ಘೋಷಿಸಿದರು. ಅವರ ದೃಢವಾದ ಉತ್ತರವನ್ನು ಕೇಳಿ ನವಾಬನು ಸಹಜವಾಗಿಯೇ ಆಶ್ಚರ್ಯಗೊಂಡನು.



ಮತಾಂತರಗೊಳ್ಳುವ ಆಯ್ಕೆಯನ್ನು ಮತ್ತೆ ತಿರಸ್ಕರಿಸಿದ್ದರಿಂದ, ಸಾಹಿಬ್ಜಾದಾರನ್ನು ಗೋಡೆಯು ನಿರ್ಮಾಣಗೊಳ್ಳುತ್ತಿದ್ದ ಸ್ಥಳಕ್ಕೆ ಕರೆದೊಯ್ಯಲಾಯಿತು. ಅವರಿಬ್ಬರನ್ನೂ ಅಕ್ಕ-ಪಕ್ಕದಲ್ಲೇ ನಿಲ್ಲಿಸಲಾಗಿತ್ತು. ಅಲ್ಲಿ ಖಾಜಿಯು ಉಪಸ್ಥಿತರಿದ್ದು, ಇವರಿಬ್ಬರಿಗೂ ಇಸ್ಲಾಂ ಧರ್ಮವನ್ನು ಸ್ವೀಕರಿಸುವಂತೆಯೂ, ಜೀವನವನ್ನು ಮೊಟಕುಗೊಳಿಸದಂತೆಯೂ ಮನವೊಲಿಸಲು ಪ್ರಯತ್ನಿಸಿದರು. ಮರಣದಂಡನೆಕಾರರು ಸಹ ಅವರಿಗೆ ತಿಳಿಸಿ ಹೇಳಲು ಪ್ರಯತ್ನಿಸಿದರು. ಆದರೆ ಅವರಿಬ್ಬರೂ ತಮ್ಮ ನಿರ್ಣಯದಲ್ಲಿ ಹಿಂಜರಿಯಲಿಲ್ಲ. ಅವರು ದೃಢವಾಗಿ ಉತ್ತರಿಸಿದರು "ನಾವು ನಮ್ಮ ಧರ್ಮವನ್ನು ಬಿಟ್ಟುಕೊಡುವುದಿಲ್ಲ, ಸಾವು ನಮ್ಮನ್ನು ಹೆದರಿಸಲಾರದು".

ಇದಾದ ನಂತರ ಗೋಡೆಯು ಇಟ್ಟಿಗೆಗಳಿಂದ ಮೇಲಕ್ಕೆ ಏರುತ್ತಿದ್ದಂತೆ, ಸಹೋದರರಿಬ್ಬರೂ ಗುರ್ಬಾನಿ ಪಠಿಸಲು ಪ್ರಾರಂಭಿಸಿದರು. ಸಂಪ್ರದಾಯದ ಪ್ರಕಾರ, ಅವರ ಕೋಮಲ ದೇಹದ ಸುತ್ತಲೂ ಇಟ್ಟಿಗೆಗಳು ಎದೆಯೆತ್ತರಕ್ಕೆ ತಲುಪುತ್ತಿದ್ದಂತೆ ಗೋಡೆಯು ಕುಸಿಯುತ್ತಿತ್ತು. ಹೀಗೆ ನಿರ್ಮಿಸಿದ ಗೋಡೆಯು ಥಟ್ಟನೆ ಕುಸಿದು ಬಿದ್ದಿದ್ದಲ್ಲದೆ, ಸಾಹಿಬ್ಜಾದಾ ಸಹೋದರರೂ ಕೂಡ ಪ್ರಜ್ಞಾಹೀನರಾಗಿ ಬಿದ್ದರು. ಅವರಿಗೆ ಪ್ರಜ್ಞೆ ಮರಳಿದೊಡನೆ, ಪುನಃ ಇಸ್ಲಾಂ ಸ್ವೀಕರಿಸುವಂತೆ ಕೇಳಿಕೊಳ್ಳಲಾಯಿತು. ಅವರು ಮತಾಂತರಗೊಳ್ಳಲು ನಿರಾಕರಿಸಿದಾಗ, ಸಾಹಿಬ್ಜಾದಾ ಜೋರಾವರ್ ಸಿಂಗ್ ಮತ್ತು ಫತೇಹ್ ಸಿಂಗ್ ಸಹೋದರರನ್ನು ಮರಣದಂಡನೆ ವಿಧಿಸುವ ಮೂಲಕ ಕೊಲ್ಲಲಾಯಿತು.

ಸ್ವಲ್ಪವೇ ದೂರದಲ್ಲಿ ತಣ್ಣನೆ-ಗೋಪುರದಲ್ಲಿ ಇರಿಸಲಾಗಿದ್ದ ವಯೋವೃದ್ಧ ಮಾತಾ ಗುಜರೀ ಜೀಯವರ ಕಿವಿಗೆ ಈ ಸುದ್ದಿ ಬೀಳುತ್ತಿದ್ದಂತೆ ಅವಳೂ ಕೊನೆಯುಸಿರೆಳೆದಳು. ಮೊಮ್ಮಕ್ಕಳೊಂದಿಗೆ ಅವಳೂ ಮೋಕ್ಷವನ್ನು ಪಡೆದಳು. ಸಿರಹಿಂದ್ ಪಟ್ಟಣದಲ್ಲಿ ಭಾರೀ ಕೋಲಾಹಲವೆದ್ದಿತು. ಈ ಘೋರ ಅಪರಾಧದಿಂದ ಎಲ್ಲರೂ ಕೋಪಗೊಂಡಿದ್ದರು. ಗುರು ಗೋಬಿಂದ್ ಸಿಂಗ್ ಜೀಯವರ ವೀರ ಪುತ್ರರ ಧೈರ್ಯ ಮತ್ತು ಸ್ಥೈರ್ಯವನ್ನು ಎಲ್ಲರೂ ಮೆಚ್ಚಿಕೊಂಡರು.

ಮರುದಿನ, ಸಿರ್ಹಿಂದ್ನ ಶ್ರೀಮಂತ ವ್ಯಾಪಾರಿ ಸೇಠ್ ತೋಡರ್ ಮಾಲ್ ಅವರು ಈ ಮೂರು ಮೃತಶರೀರಗಳ ಅಂತ್ಯಕ್ರಿಯೆಯನ್ನು ಮಾಡಿದರು. ಅಂತ್ಯಕ್ರಿಯೆಗೆ ಅಗತ್ಯವಾದಷ್ಟು ಸ್ಥಳದಲ್ಲಿ ಚಿನ್ನದ ನಾಣ್ಯಗಳನ್ನು ಹರಡಿ, ಆ ನಾಣ್ಯಗಳನ್ನು ನವಾಬನಿಗೆ ನೀಡಬೇಕೆಂಬ ಷರತ್ತಿನ ಮೇಲೆ ನವಾಬನು ಭೂಮಿಯನ್ನು ನೀಡಲು ಒಪ್ಪಿಕೊಂಡನು. ಅದರಂತೆ, ಶವಸಂಸ್ಕಾರಕ್ಕಾಗಿ ಆಯ್ಕೆ ಮಾಡಿದ ಸಂಪೂರ್ಣ ಸ್ಥಳದಲ್ಲಿ ನಾಣ್ಯಗಳನ್ನು ಹರಡಿ, ಅದನ್ನು ನವಾಬನಿಗೆ ನೀಡಲಾಯಿತು.

ಗುರು ಗೋಬಿಂದ್ ಸಿಂಗ್ ಜೀಯವರ ಇಬ್ಬರು ಹುತಾತ್ಮ ಯುವ ಪುತ್ರರ ಅಂತ್ಯಸಂಸ್ಕಾರವನ್ನು ಅವರ ಅಜ್ಜಿಯೊಂದಿಗೆ ಸಂಪೂರ್ಣ ಗೌರವಗಳೊಂದಿಗೆ ನಡೆಸಲಾಯಿತು.

ಮಾನವ ಇತಿಹಾಸದಲ್ಲಿಯೇ ಇಂತಹ ಯುವ ಬಾಲಕರ ಬಲಿದಾನಕ್ಕೆ ಸಮಾನವಾದ

ಇನ್ನೊಂದು ಉದಾಹರಣೆ ಇಲ್ಲ. ಸಾಹಿಬ್ಜಾದಾ ಜೊರಾವರ್ ಸಿಂಗ್ ಎಂಟು ವರ್ಷಕ್ಕಿಂತ ಸ್ವಲ್ಪವೇ ದೊಡ್ಡವರಾಗಿದ್ದರು ಮತ್ತು ಸಾಹಿಬ್ಜಾದಾ ಫತೇಹ್ ಸಿಂಗ್ ಆರು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರಾಗಿದ್ದರು. ಅವರನ್ನು ಜೀವಂತವಾಗಿ ಗೋಡೆಗಳ ನಡುವೆ ಇರಿಸಿ ಕೊಲ್ಲಲಾಗಿತ್ತಾದರೂ, ಅವರು ಕ್ರೂರಿ ಸರ್ಕಾರದ ದಬ್ಬಾಳಿಕೆಗೆ ತಲೆಬಾಗಿರಲಿಲ್ಲ. ಅವರು ತಮ್ಮ ಧರ್ಮದಲ್ಲಿ ದೃಢವಾಗಿದ್ದರು. ಬೈಟ್ಸ್ ಎಸೆದಾಗಲೂ ಮತ್ತು ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಬೆದರಿಕೆಯನ್ನು ಹಾಕಿದಾಗಲೂ ಇಬ್ಬರೂ ಧೈರ್ಯದಿಂದ ಉತ್ತರಿಸಿದ್ದರು "ನೀವು ಬಹುಶಃ ನಮ್ಮ ವೈಭವೋಪೇತ ಸಂಪ್ರದಾಯದ ಬಗ್ಗೆ ತಿಳಿದಿರುವುದಿಲ್ಲ. ನಮ್ಮ ಬೃಹತ್ ಪರಿವಾರದಲ್ಲಿ ಯಾವುದೇ ದುರಂತದ ನಡುವೆಯೂ ಧರ್ಮ-ವಿಶ್ವಾಸಗಳನ್ನು ಎತ್ತಿಹಿಡಿಯುವುದು ಸಂಪ್ರದಾಯವಾಗಿದೆ".

ಹಳೆಯ ಸಿರ್ಹಿಂದ್ ಪಟ್ಟಣಕ್ಕೆ ಸಮೀಪದಲ್ಲಿರುವ ಕೀರ್ತಿಶಾಲೀ ಘಟನೆಗಳ ಈ ಸ್ಥಳವು ಫತೇಘರ್ ಸಾಹಿಬ್ ಎಂದು ನಾಮಕರಣಗೊಂಡಿದ್ದು, ಈಗ ನಾಲ್ಕು ಸಿಖ್ ದೇವಾಲಯಗಳಿಂದ ಆವರಿಸಲ್ಪಟ್ಟಿದೆ. ಹುತಾತ್ಮರ ಸ್ಮರಣೆಗಾಗಿ ಪ್ರತಿ ವರ್ಷ ಡಿಸೆಂಬರ್ ೧೫ ರಿಂದ ೧೮ ರವರೆಗೆ ಇಲ್ಲಿ ಧಾರ್ಮಿಕ ಜಾತ್ರೆಯು ನಡೆಯುತ್ತದೆ. ತನ್ನ ಕಿರಿಯ ಸಾಹಿಬ್ಜಾದಾ ಸಹೋದರರು ಹುತಾತ್ಮರಾದ ಸುದ್ದಿ ನೂರಾ ಮಾಹಿಯವರ ಮೂಲಕ ತನಗೆ ಬಂದು ತಲುಪಿದಾಗ ಗುರು ಗೋಬಿಂದ್ ಸಿಂಗ್ ಜೀಯವರು ರಾಯ್ಕೋಟ್ ಎಂಬಲ್ಲಿ ಇದ್ದರು.

ಅದನ್ನು ಕೇಳಿದ ಅವರು ತನ್ನ ಬಾಣದ ತುದಿಯಿಂದ ಒಂದು ಸಸ್ಯವನ್ನು ಕಿತ್ತು ತೆಗೆದು, ಇದು



ಭಾರತದಲ್ಲಿ ಮೊಘಲ್ ಸಾಮ್ರಾಜ್ಯವನ್ನು ಬುಡಮೇಲು ಮಾಡುವ ಮುನ್ಸೂಚನೆ ಎಂಬುದಾಗಿ ಭವಿಷ್ಯವಾಣಿಯನ್ನು ನುಡಿದಿದ್ದರು. ಚಕ್ರವರ್ತಿ ಔರಂಗಜೇಬ್-ಗೆ ಅವರು ಬರೆದ ಪತ್ರ ಹೀಗಿತ್ತು : "ಕುತಂತ್ರ ಮತ್ತು ವಿಶ್ವಾಸಘಾತುಕತನದ ಮೂಲಕ ನರಿಯು ಎರಡು ಸಿಂಹದ ಮರಿಗಳನ್ನು ಕೊಲ್ಲುವಲ್ಲಿ ಯಶಸ್ವಿಯಾದರೆ ಅದು ಸಣ್ಣ ವಿಷಯವಾಗಿರುತ್ತದೆ. ಆದರೆ, ಸಿಂಹವೇ ನಿಮ್ಮ ಮೇಲೆ ಪ್ರತೀಕಾರ ತೀರಿಸಲು ಜೀವಿಸುತ್ತದೆ".

ಸಾಹಿಬ್ಜಾದಾರು ಹುತಾತ್ಮರಾದ ಸುದ್ದಿಯು ದೇಶದಲ್ಲಿ ಕೋಪದ ಅಲೆಯನ್ನು ಎಬ್ಬಿಸಿತು. ಸಿರ್ಹಿಂದ್-ನಲ್ಲಿ ನವಾಬ್ ವಜೀರ್ ಖಾನ್ ಅವರ ಆದೇಶದ ಮೇರೆಗೆ ಇಬ್ಬರು ಸಾಹಿಬ್ಜಾದಾರನ್ನು ಕ್ರೂರವಾಗಿ ಕೊಲ್ಲಲಾಯಿತು ಎಂಬ ಕಾರಣದಿಂದ ಸಿರ್ಹಿಂದ್ ಸಿಖ್ಖರ ದೃಷ್ಟಿಯಲ್ಲಿ ಶಾಪಗ್ರಸ್ತ ನಗರವಾಗಿತ್ತು. ನವೆಂಬರ್ 1708 ರಲ್ಲಿ ಗುರು ಗೋಬಿಂದ್ ಸಿಂಗ್ ಜೀಯವರು ಮರಣಹೊಂದಿದ ನಂತರ, ಬಾಬಾ ಬಂದಾ ಸಿಂಗ್ ಬಹದರ್ (1670-1716) ಅವರ ಆದೇಶದ ಮೇರೆಗೆ ಸಿರ್ಹಿಂದ್ ಮೇಲೆ ಅವರು ಉಗ್ರ ದಾಳಿಯನ್ನು ನಡೆಸಿದರು. ದಾಳಿಯಲ್ಲಿ, ಮೊಘಲ್ ಸೈನ್ಯವನ್ನು ಸೋಲಿಸಲಾಯಿತು ಮತ್ತು
1710 ರ ಮೇ 12 ರಂದು ನಡೆದ ಚಪ್ಪರ್ ಚಿರಿ ಯುದ್ಧದಲ್ಲಿ ವಜೀರ್ ಖಾನ್ ಕೊಲ್ಲಲ್ಪಟ್ಟನು. ಮೇ 14 ರಂದು ಸಿರ್ಹಿಂದ್-ನ್ನು ಸಿಖ್ಖರು ವಶಪಡಿಸಿಕೊಂಡರು.

ನಾಲ್ಕು ಸಾಹಿಬ್ಜಾದಾರ ಬಲಿದಾನವನ್ನು ಉಲ್ಲೇಖಿಸುತ್ತಾ, ಗುರು ಗೋಬಿಂದ್ ಸಿಂಗ್ ಜೀಯವರು ಸಿಖ್ಖರನ್ನು ಉದ್ದೇಶಿಸಿ ನುಡಿದರು :

**ಇನ್ನೂ ಜೀವಂತವಾಗಿರುವ ನನ್ನ ಸಾವಿರಾರು ಪುತ್ರರ ಉಳಿವಿಗಾಗಿ**
**ನಾನು ನನ್ನ ನಾಲ್ವರು ಪುತ್ರರನ್ನು ಬಲಿ ಕೊಟ್ಟಿದ್ದೇನೆ.**

